ಶ್ರೀ ಎ. ಡಿ. ಬಿಳಿಗೌಡ —ಈ ಹಣವನ್ನು ತೆಗೆದುಕೊಂಡವರು ಬಾವಿ ತೋಡದೆ ಹಣ ದುರುಪಯೋಗ ಮಾಡಿರುವುದು ಗಮನಕ್ಕೆ ಬಂದಿದೆಯೇ ? ಹಾಗೇನಾದರೂ ದುರುಪಯೋಗ ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆಯೇ ?

ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಹೇಳಿದ ಹಾಗೆ ೮೯ ಬಾವಿಗಳು ಕಂಪ್ಲೀಟ್ ಆಗಿಲ್ಲ, ಅಂದರೆ ಹಣ ದುರುಪಯೋಗವಾಗಿದೆ ಎಂದು ಅರ್ಥ. ಇದಕ್ಕಾಗಿ ಸರಕಾರದವರು ಡಿ ಸಿ.ಗೆ ಆದೇಶ ಕೊಟ್ಟು ಸಂಬಂಧಪಟ್ಟವರ ವಿಚಾರದಲ್ಲಿ ರಿಕವರಿ ಪ್ರೊಸೀಡಿಂಗ್ಸ್ ತೆಗೆದುಕೊಂಡು ಹಣ ವಸೂಲು ಮಾಡಬೇಕು ಎಂದೂ ಆಜ್ಞೆ ಮಾಡಿದ್ದಾರೆ.

ಶ್ರೀ ಎ. ಡಿ. ಬಿಳಿಗೌಡ.— ಸಾಲ ಮಂಜೂರು ಮಾಡಿದ್ದರಲ್ಲಿ ತಾಲ್ಲೂಕು ಮಂಡಳಿ ಅಧ್ಯಕ್ಷರು ಆಥವ ಬೇರೆಯವರು ಭಾಗಿಯಾಗಿರುವರೇ ? ಅವರ ಮೇಲೆ ಕ್ರಮ ತೆಗೆದುಕೊಳ್ಳುವಿರಾ ? ಸಾಲ ಕೊಡದೆ ಇರುವವರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ —ಸಾಲ ತೆಗೆದುಕೊಂಡವರ ಮೇಲೆ ಕ್ರಮ ತೆಗೆದುಕೊಳ್ಳಬೇಕೇ ಹೊರತು ಬೇರೆಯವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಂ ಎಚ್. ಜಯಪ್ರಕಾಶ್ ನಾರಾಯಣ್ .—ಮದ್ದೂರಿನ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ನೀಡಿದ ಬಾವಿ ಸಾಲಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಬಹಳ ಬುದ್ಧಿವಂತಿಕೆಯಿಂದ ವಿನೂ ಇಲ್ಲ ಎಂದು ಹೇಳಿದ್ದೀರಿ. ಬ್ಲಾಕ್ ಡೆವಲಪ್‌ಮೆಂಟ್ ಕಮಿಟಿಯ ಬ್ಲಾಕ್‌ನಲ್ಲಿರುವ ಅಧಿಕಾರಿಗಳು ತಾಲ್ಲೂಕು ಬೋರ್ಡಿನ ಅಧಿಕಾರಿಗಳಲ್ಲವೇ ? ಎರಡನ್ನೂ ಬ್ಲಾಕ್ ಕಮಿಟಿಯಲ್ಲಿ ಕೂಡಲಿ, ಬ್ಲಾಕ್ ಫಂಡ್ಸ್ ನಿಂದ ಕೊಡಲಿ, ತಾಲ್ಲೂಕು ಬೋರ್ಡ್‌ಪತಿಯಿಂದ ಕೊಟ್ಟ ಹಾಗೆ ಆಗುವುದಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ .— ಹಾಗೆ ಆಗುವುದಿಲ್ಲ ಎಂದೇ ಈ ರೀತಿ ಉತ್ತರ ಕೊಟ್ಟಿರುವುದು ಮಾನ್ಯ ಸದಸ್ಯರ ವ್ಯಾಖ್ಯಾನ ಸರಿಯಲ್ಲ.

EXTENSION OF MALUR MUNICIPAL HIGH SCHOOL BUILDING

254. SRI A. V. MUNISWAMY (Malur) .

Will the Minister for Public Works and Electricity be pleased to state :—

(*a*) the number of years ago the estimate for extension of Malur Municipal High School Building was sanctioned ;

(*b*) the extent of work turnout by the concerned contractor ;

(*c*) the quantity of Cement and Iron obtained by him for this work from the Department ;

(*d*) the extent of loss due to preparation of estimates and calling for tenders afresh ;

(*e*) whether the Departmental officers are party to this affair ?

SRI H. M. CHANNABASAPPA (Minister for Public Works and Electricity) .—

(*a*) The estimate was sanctioned during June, 1959.

(*b*) Roofing has been laid for 3 class rooms out of 5 class rooms

Asterisk indicate that remarks or speeches have not been revised by the Member Concerned.

(*c*) Cement ... 700 bags.
Steel ... 6.876 M.T.

(*d*) The extra cost involved for completing the balance work adopting the S. R. of 73-74 would be Rs. 4,974.

(*e*) No.

ಶ್ರೀ ಪಿ. ವಿ. ಮುನಿಸ್ವಾಮಿ .—ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ೭೦೦ ಮೂಟೆ ಸಿಮೆಂಟ್, ೬.೮೭೬ ಮೆಟ್ರಿಕ್ ಟನ್ಸ್ ಉಕ್ಕು ಎಂದು ಹೇಳಿದ್ದೀರಿ. ಇದನ್ನು ಯಾರು ಕೋಣೆಗಳಿಗೆ ಆಗುವ ಹಾಗೆ ಕೊಟ್ಟಿದ್ದೀರಾ ?

† ಶ್ರೀ ಎಚ್. ಎಂ. ಚೆನ್ನಬಸಪ್ಪ .—೭೦೦ ಮೂಟೆ ಸಿಮೆಂಟ್ ಉಪಯೋಗವಾಗಿ ಹೋಗಿದೆ. ೬.೮೭೬ ಟನ್ ಸ್ಟೀಲ್‌ನಲ್ಲಿ ೫.೬೬೭ ಮೆಟ್ರಿಕ್ ಟನ್ ಉಪಯೋಗವಾಗಿದೆ. ಇನ್ನು ೧.೨೦೯ ಟನ್ ಉಪಯೋಗವಾಗಿಲ್ಲ.

ಶ್ರೀ ಎ. ವಿ. ಮುನಿಸ್ವಾಮಿ .—ನನ್ನ (ಉ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಈ ಕಾಮಗಾರಿ ಪೂರ್ಣವಾಗದೆ ನಾಲ್ಕು ವರ್ಷಗಳಿಂದ ಉಳಿದುಕೊಂಡಿರುವುದರಿಂದಲೂ, ಕಂಟ್ರಾಕ್ಟ್‌ದಾರ ಪದೇ ಪದೆ ಕೆಲಸಗಳನ್ನು ಬಿಟ್ಟು ಬರುತ್ತಿರುವುದರಿಂದ ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುವ ಏರ್ಪಾಡುಮಾಡಿದ್ದೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ .—ಪಿ.ಡಬ್ಲ್ಯೂಡಿ ಕೋಡ್‌ನಲ್ಲಿ ಸಾಮಾನ್ಯವಾಗಿ ಕೆಲಸಕ್ಕೆ ಟೆಂಡರ್ ಕಾಲ್‌ಫಾರ್‌ಮಾಡಿ ಕೆಲಸಮಾಡಬೇಕು ಎಂದು ವಿಧಾಯಕವಾಗಿದೆ ಆದರಂತೆ ಮೊದಲು ಟೆಂಡರ್ ಕಾಲ ಫಾರ್‌ಮಾಡಿ ಕೆಲಸವನ್ನು ಅವರಿಗೆ ಕೊಟ್ಟಿದ್ದು. ಅವರಿಗೆ ಮೋಟಾರ್ ಆಕ್ಸಿಡೆಂಟ್ ಆಗಿ ೬—೮ ತಿಂಗಳಂ ಆಸ್ಪತ್ರೆಯಲ್ಲಿ ಇದ್ದರು ಆದರಿಂದಾಗಿ ಅವರು ಕೆಲಸವನ್ನು ನೋಟೀಸ್ ಕೊಟ್ಟಾಗ್ಲೂ ಶುರು ಮಾಡಲಿಲ್ಲ ಆದ್ದನ್ನು ಅಖೈರುಮಾಡಿ ಬೇರೆ ಟೆಂಡರ್ ಕರೆದು ಆಯಿತು ಬೇರೆ ಟೆಂಡರ್ ಕಾಲ್‌ಫಾರ್‌ಮಾಡಿ ಕೆಲಸ ಕೊಟ್ಟ ಮೇಲೆ ಕಂಟ್ರಾಕ್ಟರು ಅಗ್ರಿಮೆಂಟ್ ಅನ್ನು ಎಕ್ಸಿಕ್ಯೂಟ್‌ಮಾಡದೆ ಹಿಂದೇಟು ಹೊಡದಿದ್ದಾನೆ. ಮತ್ತೆ ೧೨ ದಿವಸದ ಹಿಂದೆ, ಟೆಂಡರ್ ಕಾಲ್‌ಫಾರ್ ಮಾಡಿದೆ. ಅಕಸ್ಮಾತ್ ಕೆಲಸ ಶುರು ಆಗದಿದ್ದರೆ, ಡಿಪಾರ್ಟ್‌ಮೆಂಟಿನವರೇ ತೆಗೆದುಕೊಂಡು ಪೂರೈಸಿಕೊಡುತ್ತೇವೆ

ಶ್ರೀ ಎ. ವಿ. ಮುನಿಸ್ವಾಮಿ .—ಕಂಟ್ರಾಕ್ಟರ್‌ಗೆ ಆಕ್ಸಿಡೆಂಟ್ ಆಯಿತು ಎಂದು ಹೇಳಿದಿರಿ. ಟೆಂಡರ್ ಸಬ್‌ಮಿಟ್‌ಮಾಡಿದ ಮೇಲೆ ಅದು ಆಯಿತೇ ಅಥವಾ ಯಾವಾಗ ಆಕ್ಸಿಡೆಂಡ್ ಆಯಿತು ಎಂದು ಹೇಳುತ್ತೀರಾ ?

ಶ್ರೀ ಎಚ್ ಎಂ. ಚೆನ್ನಬಸಪ್ಪ .—ಆತನು ಕೆಲಸವನ್ನು ಶುರುಮಾಡಿದ ಮೇಲೆ ಯಾವುದೋ ಒಂದು ದಿನ ಆಕ್ಸಿಡೆಂಟ್ ಆಗಿದೆ ಆ ರೇಟ್ ಎಲ್ಲಿ ಏತಕ್ಕೆ ಬರೆದು ಮಡಗಿಕೊಳ್ಳೋಣ.

ಶ್ರೀ ಟಿ. ಎಂ. ಮಂಜುನಾಥ .—ಈ ಕೆಲಸವನ್ನು ತೆಗೆದುಕೊಳ್ಳುವವರಿಗೆ ಆಕ್ಸಿಡೆಂಟ್ ಆಗುತ್ತದೆ ಎನ್ನುವ ಭಯದಿಂದ ಕಂಟ್ರಾಕ್ಟರು ಯಾರೂ ಮುಂದೆ ಬರುತಾ ಇಲ್ಲ ಎಂದು ಕಾಣುತ್ತದೆ. ಸರ್ಕಾರದವರು ತೆಗೆದುಕೊಂಡರೂ ಆಕ್ಸಿಡೆಂಟ್ ಆಗುತ್ತದೆ ಎಂದು ನಿಧಾನ ಆಗಿದೆಯೇ. ಈ ರೀತಿ ಯಾಗದೆ ಕೆಲಸವನ್ನು ಯಾವಾಗ ಶುರು ಮಾಡುತ್ತೀರಿ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ .—ಆಕ್ಸಿಡೆಂಟ್ ಆಗುವುದಿಲ್ಲ, ರೂಲ್ಸ್‌ನಲ್ಲಿ ಏನು ಇದೆ ಅದರಂತೆ ನಡೆಯಬೇಕಾದಂಥ ಸಂದರ್ಭ ಬರುತ್ತದೆ ನಾವು ಏತಕ್ಕೆ ಟೆಂಡರ್ ಕಾಲಾಫಾರ್ ಮಾಡಿಲ್ಲ ಏತಕ್ಕೆ ಮಾಡಿದರಂ ಎಂದು ಪ್ರಶ್ನೆಹಾಕುತ್ತೀರಿ ಟೆಂಡರ್ ಕಾಲ್‌ಫಾರ್ ಮಾಡತಕ್ಕ ಸಂಪ್ರದಾಯ ಇದೆ. ಯಾರೂ ಬರಲಿಲ್ಲ ಎಂದರೆ ಡಿಪಾರ್ಟ್‌ಮೆಂಟಿನವರು ತೆಗೆದುಕೊಂಡು ಪೂರೈಸುತ್ತೇವೆ.

ಶ್ರೀ ಎ. ವಿ. ಮುನಿಸ್ವಾಮಿ .—ಟೆಂಡರ್ ಕಾಲ್‌ಫಾರ್ ಮಾಡಿದ ಮೇಲೆ ಅವರ ಹತ್ತಿರ ಏನಾದರೂ ಅಗ್ರಿಮೆಂಟ್ ಮಾಡಿಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ .—ಅಗ್ರಿಮೆಂಟ್ ಮಾಡಿಕೊಂಡಿದ್ದೇವೆ ಅವರ ಪ್ರಕಾರ ಕೆಲಸ ನಡೆಯಲಿಲ್ಲ, ಇ. ಎಂ. ಡಿ. ೮೦೦ ರೂ. ಎಫ್. ಎಸ್. ಡಿ. ೧೨೦೦ ರೂ. ಫೈನಲ್ ಬಿಲ್ ೨೯೦ ರೂಪಾಯಿ ಒಟ್ಟು ೨,೬೦೦ ರೂಪಾಯಿಗಳಿಗೆ ಮುಟ್ಟಿ ಗೋಲು ಹಾಕಿದ್ದೇವೆ.

ಶ್ರೀ ಎ ವಿ. ಮುನಿಸ್ವಾಮಿ —ತಾವು ಎರಡು ಸಾವಿರ ರೂಪಾಯಿ ಚಿಲ್ಲರೆಗೆ ಪಂಟ್ಸುಗೋಲು ಹಾಕಿದ್ದೇವೆಂದು ಹೇಳುತ್ತೀರಿ, ಈಗ ನಾಲ್ಕು ಸಾವಿರ ರೂಪಾಯಿಗಳು ನಷ್ಟವಾಗಿರುವಾಗ, ಈ ನಷ್ಟವನ್ನು ಯಾರು ಭರ್ತಿಮಾಡುತ್ತಾರೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ .—ಅವರೇ ಭರ್ತಿ ಮಾಡಿಕೊಳ್ಳಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

KAGINI AND ALIPUR PROJECTS IN SEDAM TALUK

958. SRI J. P. SARVESH (Sedam).—

Will the Minister for Public Works and Electricity be pleased to state:—

(*a*) whether it is not a fact that about 10 years back Kagini river project and Alipur project in Sedam taluk, Gulbarga district was surveyed;

(*b*) if so, whether plans and estimate of the same have been prepared and sanctioned ;

(*c*) if so, the reason for not taking up the above mentioned projects in Sedam taluk under " 64 Famine " ?

SRI H. M. CHANNABASAPPA (Minister for Public Works and Electricity.—

(*a*) (1) Kagini Project ... Yes.
(2) Alipur tank project ... No survey has been conducted so far.

(*b*) (1) Kagini Project ... Not yet
(2) Alipur tank project ... Does not arise in view of replies to clause (*a*)

(*c*) Does not arise in view of replies to clauses (*a*) and (*b*)

SRI J. P. SARWESH:—How many acrese will be irrigated if Kagini project is completed and how much amount is required to complete this project ?

ಶ್ರೀ ಎಚ್. ಎಂ ಚನ್ನಬಸಪ್ಪ:—ಮೊದಲು ಇದ್ದುದನ್ನು ದೊಡ್ಡದಾಗಿ ಮಾಡಬೇಕು ಎಂದು ಯೋಚನೆ ಮಾಡಿ ೧೨ ಟಿಎಂಸಿಎಫ್‌ಟಿ ನೀರನ್ನು ನಿಲ್ಲಿಸಿ ಸುಮಾರು ೬೦-೭೦ ಸಾವಿರ ಎಕರೆ ನೀರಾವರಿ ಮಾಡಬೇಕು ಎಂದು ಇದೆ. ಈಗ ಇದರಲ್ಲಿ ಸಿಮೆಂಟ್ ಫ್ಯಾಕ್ಟರಿ ಮುಳುಗಡೆಯಾಗುತ್ತದೆ. ವಾಡಿಯಾ ಸಿಕಂದರಾಬಾದ್ ರೈಲ್ವೆ ಮಾರ್ಗ ಮುಳುಗಡೆಯಾಗುತ್ತದೆ. ಈ ಎರಡನ್ನು ತಪ್ಪಿಸುವುದಕ್ಕೋಸ್ಕರ ೩ ಟಿಎಂಸಿಎಫ್‌ಟಿ ನೀರನ್ನು ನಿಲ್ಲಿಸಿ ೨೧ ಸಾವಿರ ಎಕರೆಯನ್ನು ನೀರಾವರಿ ಮಾಡಬೇಕೆಂದು ಯೋಜಿಸಲಾಗಿದೆ.

SRI M. M. KHARGE:—May I know the estimated cost of this project and what are the reasons for not taking up the project so far ?

SRI H. M. CHANNABASAPPA :—The cost involved is not yet known because detailed investigation is going on. Immediately it is over, I will be in a position to tell the cost The reasons for not taking up the project are because detailed investigations are not completed.